	ಇಲಾಖೆ ಸ್ಥಳ ಪಡೆದಿದೆಯೇ? ಇದಕ್ಕಾಗಿ ನಡೆದಿರುವ ವ್ಯವಹಾರಗಳ ಬಗ್ಗೆ ಸಮಗ್ರ ವರದಿಯನ್ನು ನೀಡಲಾಗುವುದೇ?	ಪಡೆದಿರುವುದಿಲ್ಲ ಸದರೀ ಆಸ್ಪತ್ರೆಯ ೧ ಎಕರೆ ೩೦ ಗಂಟೆ ವಿಸ್ತೀರ್ಣದಲ್ಲಿ ಕಾರ್ಯನಿರ್ವಹಿಸುತ್ತದ್ದು, ಈ ವಿಸ್ತೀರ್ಣದಲ್ಲಿ ೧೧ ಆಸ್ತತ್ರೆ ಸಿಬ್ಬಂದಿಗಳ ವಸತಿಗೃಹಗಳು ಸಹ ಇರುತ್ತವೆ ಈ ಬಗ್ಗೆ ಹೊಸ ನಿವೇಶನ ಪಡೆಯಲು ವ್ಯವಹಿರಿಸಲಾಗುತ್ತಿದೆ ಪಡೆದ ನಂತರ ಕಟ್ಟಡ ಕಟ್ಟುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೮೨ (೧೯೧೭)

ಸದಸ್ಯರ ಹೆಸರು ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಫಲಾನುಭವಗಳ ಆಯ್ಕೆ ಪೂರ್ಣಗೊಂಡಿದ್ದು, ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೇವಲ ಮೂರು ಕಂಬಳ	ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ವಿದ್ಯುತ್ ಲೈನ್ ವೆಚ್ಚವನ್ನು (ಕಂಬಗಳಿಗೆ) ಫಲಾನುಭವಿಗಳೇ ಭರಿಸುವಂತೆ ನಿಗಮ ಸೂಚಿಸಿರುವುದಿಲ್ಲ

	(ಅಂದರೆ ಸುಮಾರು ೧೮೦ ಮೀಟರ್) ವರೆವಿಗೆ ಮಾತ್ರ ವೆಚ್ಚವನ್ನು ಸರ್ಕಾರ ಭರಿಸಲಿದ್ದು ಉಳಿದಿದ್ದನ್ನು ಫಲಾನುಭವಿಯೇ ಭರಿಸಲು ನಿಗಮ ಸೂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	
ಆ)	ಹಾಗಿದ್ದಲ್ಲಿ ಇದನ್ನು ಉಚಿತ ಕೊಳವೆ ಬಾವಿ ಎಂದು ಕರೆಯಲು ಸಾಧ್ಯವೇ? ಹೆಚ್ಚಿವರಿ ಕಂಬಗಳ ವೆಚ್ಚವನ್ನು ಭರಿಸುವ ಶಕ್ತಿ ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ / ಪಂಗಡದ ಜನರಿಗೆ ಭರಿಸಲಾಗುವುದೇ?	ಪ್ರಶ್ನೆ (ಅ) ಗೆ ನೀಡಿದ ಉತ್ತರದ ಹಿನ್ನಲೆಯಲ್ಲಿ ಇದು ಉದ್ಭವಿಸುವುದಿಲ್ಲ
ಇ)	ಹಾಗಾದಲ್ಲಿ, ಇದನ್ನು ಪರಿಹರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?	ಗಂಗಾ ಕಲ್ಯಾಣ ಯೋಜನೆಯಡಿ ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೊರೆದ ಕೊಳವೆಬಾವಿಗಳಿಗೆ ನಿಮ್ಮದೇ ಆದ ಟ್ರಾನ್ಸ್ ಫಾರ್ಮರ್ ಹೊಂದಿ (ಒ ವೈ ಟಿ) ಯೋಜನೆಯಿಂದ ಹೊರತುಪಡಿಸಿ ಎಲ್ಲಾ ಕೊಳವೆಬಾವಿಗಳಿಗೆ

		ವಿದ್ಯುದ್ದೀಕರಣಗೊಳಿಸಬೇಕೆಂದು ದಿನಾಂಕ ೧೦-೦೩-೦೪ ರಂದು ಸಮಾಜ ಕಲ್ಯಾಣ ಇಲಾಖೆ ಹೊರಡಿಸಿದ ಆದೇಶವನ್ವಯ, ವಿದ್ಯುತ್ ಸರಬರಾಜು ಕಂಪನಿಗಳು ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳಿಗೆ ಯಾವದೇ ಫಲಾಉಭವಗಳಿಂದ ವಿದ್ಯುತ್ ಲಐನ್ ವೆಚ್ಚವನ್ನು ಭರಿಸಿಕೊಳ್ಳಧೇ, ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೮೩ (೨೧೨೧)

ಸದಸ್ಯರ ಹೆಸರು ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಉತ್ತರಿಸುವ ಸಚಿವರು ಶ್ರೀ ಇಕ್ಬಾಲ್ ಅನ್ಸಾರಿ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳ್ತಂಗಡಿ ತಾಲ್ಲೂಕಿನ ಮಾಲಾಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸರಕರ ಮಂಜೂರು ಮಾಡಿದ ಮತ್ತು ಬಿಡುಗಡೆಗೊಳಿಸಿದ ಹಣದ ಮೊತ್ತ ಎಷ್ಟು?	ಇಲ್ಲ